ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 07 ಗ್ರಾಪಸ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:26-02-2019

## ಸುತ್ತೋಲೆ

ವಿಷಯ: 2018-19ನೇ ಸಾಲು ಮತ್ತು ಮುಂದೆ 14ನೇ ಹಣಕಾಸು ಆಯೋಗದಡಿ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು ಪೂರೈಸಬೇಕಾದ ಷರತ್ತುಗಳ ಕುರಿತು.

ಉಲ್ಲೇಖ:
1. ಭಾರತ ಸರ್ಕಾರದ ಮಾರ್ಗಸೂಚಿಗಳ ಪತ್ರ ಸಂಖ್ಯೆ:13(32) FCC/FCD/2015-16, ದಿನಾಂಕ:08-10-2015.
2. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಅರೆ ಸರ್ಕಾರಿ ಪತ್ರ ಸಂಖ್ಯೆ:N-11011/4/2017/FD, ದಿನಾಂಕ:19-01-2018
3. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 07 ಗ್ರಾಪಸ 2018, ದಿನಾಂಕ:30-08-2018.
4. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಅರೆ ಸರ್ಕಾರಿ ಪತ್ರ ಸಂಖ್ಯೆ:N-11011/4/2017-FD, ದಿನಾಂಕ:22-02-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1) ರ ಭಾರತ ಸರ್ಕಾರದ ಮಾರ್ಗಸೂಚಿಗಳ ಆಧಾರದ ಮೇಲೆ ಹಾಗೂ ಉಲ್ಲೇಖ (2)ರ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಿದಂತೆ, 14ನೇ ಹಣಕಾಸು ಆಯೋಗ ಅನುದಾನದಲ್ಲಿ ಕಾರ್ಯಕ್ಷಮತೆ ಅನುದಾನ ಪಡೆಯಲು ಉಲ್ಲೇಖಿತ (3)ರ ಸುತ್ತೋಲೆಯಲ್ಲಿ ವಿವರಗಳು ನೀಡಿರುತ್ತದೆ. ಜಂಟಿ ಕಾರ್ಯದರ್ಶಿಗಳು, ಭಾರತ ಸರ್ಕಾರದ ರವರ ಉಲ್ಲೇಖಿತ (4)ರ ಪತ್ರದಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ.

**"Two additional factors for evaluation, namely open Defecation Free (ODF) status and child immunization status apart from the conditions prescribed for financial year 2017-18, namely submission of audited accounts and increasing Own Source Revenue (OSR) as prescribed by FFC, with the maximum cap of 5 times the Basic Grants allocation for the GPs".**

ಪ್ರಸ್ತುತ 2018-19 ಮತ್ತು ಮುಂದೆ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿರುತ್ತದೆ. ಉಲ್ಲೇಖ(4)ರ ಅರೆ ಸರ್ಕಾರಿ ಪತ್ರದಲ್ಲಿ ಕೇಂದ್ರ ಸರ್ಕಾರವು ಹೊರಡಿಸಿರುವಂತಹ ಮಾರ್ಗಸೂಚಿಗಳ ಪ್ರಕಾರವೇ ಗ್ರಾಮ ಪಂಚಾಯತಿಗಳು ಈ ಕೆಳಕಂಡ ಐದು ಷರತ್ತುಗಳನ್ನು ಪೂರೈಸಬೇಕಾಗಿರುಗುತ್ತದೆ.

- ಗ್ರಾಮ ಪಂಚಾಯತಿಗಳು ಕಾರ್ಯಕ್ಷಮತೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸುವ ಸಾಲಿನ ಎರಡು ವರ್ಷಗಳ ಹಿಂದಿನ ಲೆಕ್ಕ ಪರಿಶೋಧಿತಾ ವಾರ್ಷಿಕ ಲೆಕ್ಕ ವರದಿ (2016-17)ಗಳನ್ನು ಸಲ್ಲಿಸಿರಬೇಕು.
- ಗ್ರಾಮ ಪಂಚಾಯತಿಗಳು ವಾರ್ಷಿಕ ಲೆಕ್ಕ ವರದಿಯಲ್ಲಿ ತೋರಿಸಿರುವಂತೆ ಅದರ ಹಿಂದಿನ ವರ್ಷಕ್ಕಿಂತ ಆ ಸಾಲಿನಲ್ಲಿ (2015-16 & 2016-17) ತನ್ನ ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಂಡಿರಬೇಕು

- ಬಯಲು ಶೌಚಮುಕ್ತ ಗ್ರಾಮ ಪಂಚಾಯತಿಯಾಗಿರಬೇಕು (ಕಾರ್ಯಕ್ಷಮತೆ ಅನುದಾನವನ್ನು ಪಡೆಯುವ ಆರ್ಥಿಕ ವರ್ಷದ ಹಿಂದಿನ ದಿನಾಂಕದವರೆವಿಗೂ ಅಂದರೆ, ದಿನಾಂಕ:31-03-2018ರವರೆಗೆ ಮೌಲ್ಯಮಾಪನಕ್ಕೆ ಪರಿಗಣಿಸುವುದು)
- ಮಗುವಿನ ಪ್ರತಿರಕ್ಷಣೆ (Child immunisation) ಆಗಿರಬೇಕು (ಕಾರ್ಯಕ್ಷಮತೆ ಅನುದಾನವನ್ನು ಪಡೆಯುವ ಆರ್ಥಿಕ ವರ್ಷದ ಹಿಂದಿನ ದಿನಾಂಕದವರೆವಿಗೂ ಅಂದರೆ, ದಿನಾಂಕ:31-03-2018ರವರೆಗೆ ಮೌಲ್ಯಮಾಪನಕ್ಕೆ ಪರಿಗಣಿಸುವುದು).
- ಅರ್ಹ ಗ್ರಾಮ ಪಂಚಾಯತಿಯು ಪಡೆಯುವ ಕಾರ್ಯಕ್ಷಮತೆ ಅನುದಾನವು ಆ ಆರ್ಥಿಕ ಸಾಲಿನ ಸಾಮಾನ್ಯ ಮೂಲ ಅನುದಾನದ 5 ರಷ್ಟು ಅನುದಾನದ ಮೊತ್ತಕ್ಕೆ ಹೆಚ್ಚಾಗಿರಬಾರದು (Maximum cap of 5 times the Basic Grant allocation for the GPs).

2018-19 ಹಾಗೂ 2019-20ನೇ ಸಾಲಿಗೆ 14ನೇ ಹಣಕಾಸು ಆಯೋಗ ಅನುದಾನದ ಕಾರ್ಯಕ್ಷಮತೆ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸುವ ಮಾನದಂಡಗಳು ಈ ಕೆಳಕಂಡಂತೆ ಮೌಲ್ಯಮಾಪನ ಮಾಡಬೇಕಾಗಿರುತ್ತದೆ.

**ಕಾರ್ಯವಿಧಾನ**

1. 2018-19ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು 2016-17ನೇ ಸಾಲಿನ ಪರಿಶೋಧಿತಾ ವಾರ್ಷಿಕ ಲೆಕ್ಕ ವರದಿಯನ್ನು ಸಲ್ಲಿಸಿರಬೇಕು.
2. ಲೆಕ್ಕ ಪರಿಶೋಧನಾ ವಾರ್ಷಿಕ ಲೆಕ್ಕ ವರದಿ ಅಂದರೆ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲವು ಗ್ರಾಮ ಪಂಚಾಯತಿಯ ಲೆಕ್ಕ ಪರಿಶೋಧನೆ ಮಾಡಿ ಸಲ್ಲಿಸಿರುವ ವರದಿಯಾಗಿರುತ್ತದೆ.
3. ಗ್ರಾಮ ಪಂಚಾಯತಿಯ ಸ್ವಂತ ಸಂಪನ್ಮೂಲ ಎಂದರೆ, ಗ್ರಾಮ ಪಂಚಾಯತಿಗಳು ಆ ವರ್ಷದಲ್ಲಿ ಇರುವ ಬೇಡಿಕೆಗೆ ಎದುರು ಸಂಗ್ರಹ ಮಾಡಿರುವಂತಹ ಎಲ್ಲಾ ಮೂಲದ ತೆರಿಗೆ ಮತ್ತು ತೆರಿಗೇತರ ಹಾಗೂ ಸ್ವಂತ ಆದಾಯವಾಗಿರುತ್ತದೆ.
4. ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವುದು ಎಂದರೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 199 ಅನುಸೂಚಿ 4ರಲ್ಲಿ ನಿರ್ದಿಷ್ಟಪಡಿಸಿರುವ ತೆರಿಗೆ ಸಂಗ್ರಹ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 70ರಡಿಯಲ್ಲಿ ಲೈಸೆನ್ಸ್ ಫೀಗಳು ಮತ್ತು ಸ್ವಂತ ಆಸ್ತಿಯಿಂದ ಬರಬಹುದಾದ ಬಾಡಿಗೆ ಮಾತ್ರ., ಉದಾಹರಣೆ: 2018-19ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸುವುದು. 2019-20ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು 2017-18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸುವುದು. ಇದೇ ರೀತಿ ಅನುಕ್ರಮವಾಗಿಸುದು.
5. ಮೇಲಿನ ಸೂಚನೆಗಳು 2018-19ನೇ ಸಾಲಿನಿಂದ 2019-20ನೇ ಸಾಲಿನವರೆವಿಗೂ ಅನ್ವಯಿಸುತ್ತದೆ. ಅಂದರೆ, 14ನೇ ಹಣಕಾಸು ಆಯೋಗ ಅನುದಾನದ ಅವಧಿಯವರೆಗೆ ಇರುತ್ತದೆ.
6. 14ನೇ ಹಣಕಾಸು ಆಯೋಗ ಅನುದಾನದ ಕಾರ್ಯಕ್ಷಮತೆ ಅನುದಾನವನ್ನು ಭಾರತ ಸರ್ಕಾರದ ವಿತ್ತಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಗಳ ಪತ್ರ ಸಂಖ್ಯೆ; 13(32) ಎಫ್ಎಫ್ಸಿ/ಎಫ್ಸಿಡಿ/2015-16, ದಿನಾಂಕ:08-10-2015 ಹಾಗೂ ಇದಕ್ಕೆ ಅನುಗುಣವಾಗಿ ಹೊರಡಿಸಿರುವ ರಾಜ್ಯ ಸರ್ಕಾರದ ಮಾರ್ಗಸೂಚಿಗಳ ಸಂಖ್ಯೆ:ಗ್ರಾಅಪ 75 ಗ್ರಾಪಸ 2015, ದಿನಾಂಕ:03-02-2018 ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015, ದಿನಾಂಕ:04-02-2019ರಲ್ಲಿ ತಿಳಿಸಿರುವಂತೆ ಉಪಯೋಗಿಸಿಕೊಳ್ಳತಕ್ಕದ್ದು.

7. 14ನೇ ಹಣಕಾಸು ಆಯೋಗದ ಕಾರ್ಯಕ್ಷಮತೆ ಅನುದಾನವನ್ನು ಅರ್ಹ ಗ್ರಾಮ ಪಂಚಾಯತಿಗಳಿಗೆ ಹಂಚಿಕೆ ಮಾಡುವುದು. ಹಂಚಿಕೆ ಮಾಡಿ ಉಳಿದ ಅನುದಾನವನ್ನು, ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸಿದ ಗ್ರಾಮ ಪಂಚಾಯತಿಗಳಿಗೆ ಸರಿಸಮಾನವಾಗಿ ಹಂಚಲಾಗುವುದು.

(ಎಸ್.ಎಂ.ಜುಲ್ ಫಿಖಾರ್ ಉಲ್ಲಾ)
ನಿರ್ದೇಶಕರು (ಪಂ.ರಾಜ್-2)ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

27.02.19

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
3. ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
3. ಸರ್ಕಾರದ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
4. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಆಯೋಗ ಕೋಶ, ಆರ್ಥಿಕ ಇಲಾಖೆರವರ ಆಪ್ತ ಸಹಾಯಕರು.
5. ನಿರ್ದೇಶಕರು (ಪಂ.ರಾಜ್-1 ಮತ್ತು 2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರುರವರ ಆಪ್ತ ಸಹಾಯಕರು.
7. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
8. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
9. ವೆಬ್ ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.